

ತರಗಲೆಯ ಮಡಿಲಿನಲ್ಲಿ ಅರಳಿದ ಶಿಲೀಂಧ್ರಗಳು

# ಕಾನನದ ತಾರೆಯರು

**ಮಳೆಯಲ್ಲಿ ಮಿಂದೇಳುವ ಪಶ್ಚಿಮಘಟ್ಟಗಳ ತೋಟ–ಮಳೆಕಾಡುಗಳು ಕೌತುಕದ ಹೊಸ ಸಾಮ್ರಾಜ್ಯದಂತೆ ಕಾಣುತ್ತವೆ. ಬಗೆಬಗೆಯ ರೂಪದಲ್ಲಿ ಜೀವತಳೆಯುವ ಶಿಲೀಂಧ್ರಗಳು ಕಾನನದ ಸುಂದರಿಯರಂತೆ ಕಂಗೊಳಿಸುತ್ತವೆ.**

■ **ಚಿಕ್ಕಾಯರಹಳ್ಳಿ ಡಿ. ಕೃಷ್ಣಚೈತನ್ಯ**



ಒಂಟಿ ಸುಂದರಿ

ಪಶ್ಚಿಮ ಘಟ್ಟಗಳ ತೋಟ, ಮಳೆಯ ಕಾಡುಗಳಲ್ಲಿ ಮಳೆ ಬೀಳಲು ಆರಂಭವಾಗುತ್ತಿದ್ದಂತೆ ಶಿಲೀಂಧ್ರಗಳ ಲೋಕವೇ ಅನಾವರಣಗೊಳ್ಳುತ್ತದೆ. ಹಸಿ ನೆಲ, ಒಣಗಿದ ರೆಂಬೆ–ಕೊಂಬೆ, ಬಿದ್ದ ಎಲೆ, ಹುಲ್ಲಿನ ಗರಿಗಳು, ಮಣ್ಣಿನೊಳಗಿನ ಒಣಗಿದ ಬೇರು, ಕೊಳಕಾದ ಬಟ್ಟೆ, ಬಿದ್ದಿರುವ ಆನೆಯ ಲದ್ದಿ, ಕೊಳೆಯುತ್ತಿರುವ ಹಣ್ಣು–ತರಕಾರಿ... ಹೀಗೆ ಎಲ್ಲೆಂದರಲ್ಲಿ ಶಿಲೀಂಧ್ರಗಳು ಜೀವ ತಳೆಯುತ್ತವೆ. ಅವು ಯಾವುವು ಎಂದಿರಾ? ಅವುಗಳೇ ಅಣಬೆ (ಅಗ್ಯಾರಿಕಸ್), ರೈಜೋಪಸ್, ಬ್ರೆಡ್ ಮೌಲ್ಡ್, ಸ್ನೋ ಫಂಗಸ್, ಇತ್ಯಾದಿ.

ಬಯಲು ಪ್ರದೇಶಗಳಲ್ಲಿ ಒಣಗಿ ಬಿದ್ದ ಮರಗಳನ್ನು ವಿಲೇವಾರಿ ಮಾಡಲು ಬೇಕಾದಷ್ಟು ಜನರಿದ್ದಾರೆ. ಹಸಿ ಮರಗಳನ್ನೇ ಕಡಿದು ಸಾಮಿಲ್ಲಿಗೆ ಸಾಗಿಸುವ ಖದೀಮರಿದ್ದಾರೆ. ಸೌದೆಗೆ ಕಾದಿರುವ ಸಾಮಾನ್ಯರಿದ್ದಾರೆ. ಅನುಪಯುಕ್ತ ಮರಗಳನ್ನು ತಿಂದು ಸ್ವಚ್ಛಗೊಳಿಸುವ ಗೆದ್ದಲುಗಳಿವೆ. ಆದರೆ ಜನರೇ ಇಲ್ಲದ ಮಳೆಯ ಕಾಡುಗಳಲ್ಲಿ ಮರಗಳನ್ನು ಸ್ವಚ್ಛಗೊಳಿಸುವವರು ಬೇಕಲ್ಲವೆ? ಆ ಕೆಲಸ ಮಾಡುವುದು ಶಿಲೀಂಧ್ರಗಳು.

ಶಿಲೀಂಧ್ರ, ಕೊಳೆತಿನಿ ವರ್ಗಕ್ಕೆ ಸೇರುತ್ತದೆ. ಕೊಳೆತಿನಿಗಳಲ್ಲಿಯೂ ಹಲವು ವೈಶಿಷ್ಟ್ಯಗಳಿವೆ. ಒಮ್ಮೆ ಮಣ್ಣಿನ ದಾರಿಯಲ್ಲಿ ನಡೆದು ಹೋಗುತ್ತಿದ್ದಾಗ, ಯಾರೋ ಏನೋ ಬೀಳಿಸಿಕೊಂಡು ಹೋಗಿದ್ದಾರಲ್ಲ ಎಂದು ಎತ್ತಿಕೊಳ್ಳಲು ಬಾಗಿ ಪ್ರಯತ್ನಿಸಿದೆ, ಬರಲಿಲ್ಲ. ಆಶ್ಚರ್ಯದಿಂದ ಅಲುಗಾಡಿಸಿದಾಗಲೇ ನನಗೆ ತಿಳಿದಿದ್ದು, ಇದು ಅಣಬೆ ರೀತಿಯ ಶಿಲೀಂಧ್ರವೆಂದು. ಸಾಮಾನ್ಯವಾಗಿ ಅಣಬೆಗೆ ಒಂದು ಕಡ್ಡಿಯಂತಹ ಕಾಂಡ (ತೊಟ್ಟು) ಇದ್ದು, ಛತ್ರಿಯಂತಹ ಕೊಡೆ (ಟೊಪ್ಪಿ) ಇರುತ್ತದೆ. ಆದರೆ ನಾನು ಕಂಡಿದ್ದು ಸಂಪೂರ್ಣ ಭಿನ್ನವಾಗಿತ್ತು.

ವಿದ್ಯಾರ್ಥಿಗಳಿಗೆ ಜೀವಶಾಸ್ತ್ರ ಪಾಠ ಮಾಡಲು



ಮರವೇರುವ ಸಡಗರದಲ್ಲಿ...